ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ವಿದ್ಯುತ್ ಸಾಮಗ್ರಿಗಳ ಕೊರತೆ

2429 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ವಿದ್ಯುತ್ ಸರಬರಾಜು ಬಗ್ಗೆ ಯಾವ ಯಾವ ಸಾಮಗ್ರಿ ಉಪಯೋಗಿಸುತ್ತೀರಿ? (ವಿವರವಾದ ಮಾಹಿತಿ ನೀಡುವುದು)

ಆ) 1994-95 ರಿಂದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಸಿಸಿಇ-ಯಲ್ಲಾಪುರ ವಿಭಾಗ, ಯಾವ ಯಾವ ಸಾಮಗ್ರಿ ನೀಡಲಾಗಿದೆ. (ವಿವರವಾದ ಮಾಹಿತಿ ನೀಡುವುದು)

ಇ) ಸಾಮಗ್ರಿ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ವಿದ್ಯುತ್ ಸರಬರಾಜಿಗಾಗಿ ಉಪಯೋಗಿಸಲಾಗುತ್ತಿರುವ ಮುಖ್ಯವಾದ ಸಾಮಗ್ರಿಗಳ ವಿವರ ಕೆಳಕಂಡಂತಿದೆ.

1. ಆರ್.ಸಿ.ಸಿ : ಪಿ.ಸಿ.ಸಿ ಕಂಬಗಳು - 7.5 ಮೀಟರ್: 8 ಮೀಟರ್ : 9 ಮೀಟರ್ ಉದ್ದವುಗಳು
2. ವಿದ್ಯುತ್ ಪರಿವರ್ತಕಗಳು -25:63:100:250:500 ಕೆವಿಎ ಸಾಮರ್ಥ್ಯದವುಗಳು.
3. ಅಲ್ಯೂಮಿನಿಯಮ್ ವಾಹಕಗಳು - ನಂ.2 ನಂ. 4 ಮತ್ತು ರ್ಯಾಬಿಟ್ ವಾಹಕಗಳು.
4. ನಿರೋಧಕಗಳು - ನಂ.8, ನಂ. 15, (ಇನ್ಸುಲೇಟರ್ಸ್) 1.1 ಕೆ.ವಿ. 11 ಕೆ.ವಿ ಸಾಮರ್ಥ್ಯದವುಗಳು.
5. ಕ್ರಾಸ್ ಆರ್ಮ್‌ಗಳು - 2 ಪಿನ್, 4 ಪಿನ್, ಹಾರಿಜಾಂಟಲ್ ಮತ್ತು 3 ಪಿನ್ ವಿಶೇಷದವುಗಳು.
6. ಕ್ಲಾಂಪ್‌ಗಳು.
7. ಗೈವೈರುಗಳು
8. ವಿವಿಧ ಸೈಜಿನ ಬೋಲ್ಟ್ಸ್ ಮತ್ತು ನಟ್ಟುಗಳು.
9. ಬಿ.ಐ. ವೈರುಗಳು
10. ಪರಿವರ್ತಕವನ್ನು ಕೂಡಿಸುವ ಕಬ್ಬಿಣದ ಟ್ರಾನ್ಸ್‌ಫಾರ್ಮರ್ ರಚನೆಗಳು.
11. ಹೆಚ್. ಟಿ. ವಿದ್ಯುತ್ ಮಾಪಕಗಳನ್ನು ಅಳವಡಿಸುವ ಪೆಟ್ಟಿಗೆಗಳು.

12. ಪಿ.ವಿ.ಸಿ. ನಿರೋಧಕ ಮತ್ತು ಪಿವಿಸಿ ಕವಚವನ್ನು ಹೊಂದಿರುವ ಅಲ್ಯೂಮಿನಿಯಂ ವೈರ್‌ಗಳು ವಿವಿಧ ಸೈಜ್‌ಗಳು.

13. ಇತರೆ ಸಣ್ಣ ಪುಟ್ಟ ಸಾಮಗ್ರಿಗಳು ಹಾಗೂ ಸಲಕರಣೆಗಳು.

ಆ) 1994-95ನೇ ಸಾಲಿನಿಂದ ಈಚೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಎರಡು ವಿಭಾಗಗಳಾದ ಕಾರವಾರ ಮತ್ತು ಸಿರಸಿಗಳಿಗೆ ನೀಡಲಾಗಿರುವ ಮುಖ್ಯವಾದ ವಿದ್ಯುತ್ ಸಾಮಾಗ್ರಿಗಳ ವಿವರ ಕೆಳಕಂಡಂತಿದೆ.

ಕ್ರ. ಸಂ.	ಸಾಮಗ್ರಿ ವಿವರ	1994 -95	1995 -96	1996 -97	1994 -95	1995 -96	1996 -97
1.	25 ಕೆ.ವಿ.ಎ. ಪರಿವರ್ತಕಗಳು	88	34	27	92	32	99
2.	63 ಕೆ.ವಿ.ಎ. ಪರಿವರ್ತಕಗಳು	57	54	81	42	36	189
3.	100 ಕೆ.ವಿ.ಎ ಪರಿವರ್ತಕಗಳು	31	28	32	32	25	162
4.	ಸ್ಕಿರ್‌ಲೆವಾದಕ	364 ಕಿ.ಮಿ.	175 ಕಿ.	145 ಕಿ.	507 ಕಿ.	216 ಕಿ.	345 ಕಿ
5.	ವೀಸಲ್‌ವಾದಕ	200 ಕಿ.ಮಿ.	56 ಕಿ.	65 ಕಿ.	255 ಕಿ.	80 ಕಿ	134 ಕಿ
6.	ರ‍್ಯಾಬಿಡ್ ವಾಹಕ	500 ಕಿ.ಮಿ	12 ಕಿ.	14 ಕಿ	10 ಕಿ.	38 ಕಿ.	22 ಕಿ.
7.	ಟಿ.ಸಿ. ಸೆಟ್ ರಚನೆಗಳು	55	50	43	35	34	76
8.	ಅಡ್ಡಪಟ್ಟಿಗಳು	3600	3000	2000	2100	5500	2200
9.	ಕ್ಲಾಂಪ್‌ಗಳು	2580	2300	2800	2600	2400	3800
10.	1.1 ಕೆ.ವಿ. ಪಿನ್ ನಿರೋಧಕಗಳು	600	2000	1100	1000	1200	2200
11.	11 ಕೆ.ವಿ. ಪಿನ್ ನಿರೋಧಕಗಳು	1200	400	800	1100	2300	1500
12.	ನಂ.8 ನಿರೋಧಕಗಳು.	200	1900	850	500	500	1250
13.	ನಂ.15 ನಿರೋಧಕಗಳು.	400	150	490	450	600	860

ಇದಲ್ಲದೆ ಇತರೆ ಸಣ್ಣಪುಟ್ಟ ಸಾಮಗ್ರಿಗಳು : ಸಲಕರಣೆಗಳು ಸಹ ನೀಡಲಾಗಿರುತ್ತದೆ.

ಇ) ಮತ್ತು ಈ) ಸಾಮಗ್ರಿಗಳ ಕೊರತೆಯಿಂದ, ಸ್ವಲ್ಪ ಮಟ್ಟಿಗೆ ನಿಶ್ಚಿತ ಪ್ರಗತಿಯನ್ನು ಸಾಧಿಸುವುದರಲ್ಲಿ ತೊಂದರೆಯಾಗುತ್ತಿರುವುದು ಮಂಡಳಿಯ ಗಮನದಲ್ಲಿದೆ. ಆದ್ದರಿಂದ ಮಂಡಳಿಯಲ್ಲಿ ಲಭ್ಯವಿರುವ ಸಾಮಗ್ರಿಯನ್ನು ಎಲ್ಲಾ ವಿಭಾಗಗಳಿಗೂ ಸಾಧ್ಯವಾದಷ್ಟು ವಿಚಕ್ಷಣೆಯಿಂದ ಪೂರೈಸಲಾಗುತ್ತಿದೆ. ಆಯಾ ವರ್ಷಗಳಲ್ಲಿ ನಿಗದಿಪಡಿಸಲಾದ ಸಾಧನೆಗೆ ಅನುಸಾರವಾಗಿ ಸಾಮಗ್ರಿ ಬಜೆಟ್ ತಯಾರಿಸಿ ಅದೇ ಪ್ರಕಾರವಾಗಿ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ. ಆದರೆ ಸಾಮಗ್ರಿಗಳ ಸರಬರಾಜಿನಲ್ಲಾಗುವ ಲೋಪದೋಷಗಳು, ಹಾಗೂ ಏರುಪೇರುಗಳಿಂದ ಕೆಲವು ವಿಭಾಗಗಳಿಗೆ ಕೆಲವು ವೇಳೆ ಸ್ವಲ್ಪ ಮಟ್ಟಿಗೆ ತೊಂದರೆಯಾಗುತ್ತಿದ್ದರೂ ಸಹ ಮಂಡಳಿಯು ಪರಿಸ್ಥಿತಿಯನ್ನು ಸುಧಾರಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಕೆ.ಪಿ.ಸಿ ಮತ್ತು ಕೆ.ಇ.ಬಿ ಗಳ ವಿದ್ಯುತ್ ಸ್ಥಾವರಗಳಿಂದ ಉತ್ಪಾದನಾ ಪ್ರಮಾಣ

2432 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಪಿ.ಸಿ. ಮತ್ತು ಕೆ.ಇ.ಬಿ. ಹೊಂದಿರುವ ವಿದ್ಯುತ್ ಸ್ಥಾವರಗಳು ಯಾವುದು? ಉತ್ಪಾದನಾ ಸಾಮರ್ಥ್ಯಕ್ಕೆ ಮತ್ತು ಕಳೆದ 5 ವರ್ಷಗಳಲ್ಲಿ ಉತ್ಪಾದಿಸಿರುವ ವಿದ್ಯುತ್ತಿನ ಪ್ರಮಾಣವೆಷ್ಟು? ಉತ್ಪಾದನಾ ಸಾಮರ್ಥ್ಯಕ್ಕೆ ಹೋಲಿಸಿದರೆ ಉತ್ಪಾದಿಸಿದ ವಿದ್ಯುತ್ ಶೇಕಡಾ ಪ್ರಮಾಣವೆಷ್ಟು?

ಆ) ಕಳೆದ 5 ವರ್ಷಗಳಲ್ಲಿ ಬೇರೆ ರಾಜ್ಯಗಳು ಹಾಗೂ ರಾಷ್ಟ್ರೀಯ ಗ್ರಿಡ್‌ನಿಂದ ಪ್ರತಿ ತಿಂಗಳು ಖರೀದಿಸಿದ ವಿದ್ಯುತ್ತಿನ ಪ್ರಮಾಣವೆಷ್ಟು? ಯಾವ ದರದಲ್ಲಿ ವಿದ್ಯುತ್ ಖರೀದಿಸಲಾಗಿತ್ತು?

ಇ) ಕಳೆದ 5 ವರ್ಷಗಳಲ್ಲಿ ಕೆ.ಇ.ಬಿ. ಮತ್ತು ಕೆ.ಪಿ.ಸಿ. ಬೇರೆ ರಾಜ್ಯಗಳಿಗೆ ಮಾರಿರುವ ವಿದ್ಯುತ್ತಿನ ಪ್ರಮಾಣ ಎಷ್ಟು? ಯಾವ ದರದಲ್ಲಿ ಮಾರಾಟ ಮಾಡಲಾಯ್ತು?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಕೆ.ಇ.ಬಿ. ಹೊಂದಿರುವ ವಿದ್ಯುತ್ ಸ್ಥಾವರಗಳು ಮತ್ತು ಇದರ ಸಾಮರ್ಥ್ಯಗಳು ಈ ಕೆಳಗಿನಂತಿವೆ. (31-7-97 ರಂತೆ)

1.	ಶಿವನಸಮುದ್ರಮ್	42.0	ಮೆ.ವ್ಯಾ.
2.	ಶಿಂಷಾ	17.2	”
3.	ಎಮ್. ಜಿ.ಹೆಚ್.ಇ. ಜೋಗ್	120.0	”
4.	ತುಂಗಭದ್ರಾ ಅಣೆಕಟ್ಟಿನ ವಿದ್ಯುತ್ ಉತ್ಪಾದನೆ ಕೇಂದ್ರ	14.4	”
5.	ಮುನಿರಾಬಾದ್ ವಿದ್ಯುತ್ ಕೇಂದ್ರ	27.0	”